ಶ್ರೀ ಪಂಪಾಪತಿ.—ಸ್ವಾಮಿ ಕನ್ನಡದಲ್ಲಿ ಅಚ್ಚಾಗಿರುವ ಕಡೆ ಳನೇ ನಂಬರ್ ಹೆದ್ದಾರಿ ಎಂದು ಇದೆ. ಇಂಗ್ಲೀಷಿನಲ್ಲಿ ಅಚ್ಚಾಗಿರುವ ಕಡೆ ಳನೇ ನಂಬರ್ ಹೆದ್ದಾರಿ ಎಂದು ಇದೆ. ಆದರೆ ಅದು ನಾಲ್ಕನೇ ನಂಬರ್ ಹೆದ್ದಾರಿ. ಹೆದ್ದಾರಿಯನ್ನು ದಾವಣಗೆರೆ ನಗರದ ಹೊರವಲಯದಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಯೋಜನೆಯನ್ನು ತಯಾರಿಸಲಾಗಿದ್ದು ಯೋಜನೆಯ ಅಂದಾಜನ್ನು ಕೇಂದ್ರಸರ್ಕಾರದ ಅನುಮೋದನೆಗೆ ಕಳುಹಿಸಲಾಗಿದೆ ಎಂದು ಹೇಳಿದ್ದೀರಿ ಆದರೆ ಈಗಾಗಲೇ ಅದಕ್ಕೋಸ್ಕರ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಹರಿಹರದ ಹತ್ತಿರ ಸೇತುವೆ ಕಟ್ಟಿದ್ದಾರೆ. ಕೇಂದ್ರ ಸರ್ಕಾರದ ಅನುಮೋದನೆ ಇಲ್ಲದೆ ಹೇಗೆ ಲಕ್ಷಾಂತರ ರೂಪಾಯಿಯನ್ನು ಖರ್ಚು ಮಾಡಿದ್ದೀರಿ ಸ್ವಾಮಿ ?

† **ಶ್ರೀ ಎಸ್. ಬಂಗಾರಪ್ಪ.**—ಸ್ವಾಮಿ, ಇಂಗ್ಲೀಷಿನಲ್ಲಿ ಅಚ್ಚಾಗಿರುವ ಕಡೆ ಳನೇ ನಂಬರ್ ಹೆದ್ದಾರಿ ಎಂದು ಇದೆ. ಇದೇ, ಸರಿ ಕನ್ನಡದಲ್ಲಿ ಅಚ್ಚಾಗಿರುವುದು ತಪ್ಪು. ದಾವಣಗೆರೆ ಹೊರವಲಯದಲ್ಲಿ ಬೈಪಾಸನ್ನು ರಚಿಸುವ ಯೋಜನೆಗೆ ಕೇಂದ್ರಸರ್ಕಾರದವರು ಅನುಮೋದನೆ ಕೊಡುವ ಮುನ್ನವೇ ಹರಿಹರದ ಹತ್ತಿರ ಇಲಾಖೆಯವರು ಹಣವನ್ನು ಖರ್ಚು ಮಾಡಿ ಕೆಲಸ ತೆಗೆದುಕೊಂಡಿರುವುದು ಬೆಳಗಿ ಶಾಧ್ಯ ಎಂಬ ಪ್ರಶ್ನೆಯನ್ನು ಮಾನ್ಯ ಸದಸ್ಯರು ಹಾಕಿದ್ದಾರೆ. ಮಾನ್ಯ ಅಧ್ಯಕ್ಷರೇ ನನ್ನ ಮುಂದೆ ಬಂದಿರುವಂತೆ ವರದಿ ಪ್ರಕಾರ ನಾವು ೯೬ ಪರ್ಸೆಂಟ್ ಭೂಸ್ವಾಧೀನ ಮಾಡಿಕೊಂಡಿದ್ದೇವೆ. ಇನ್ನು ೪ ಪರ್ಸೆಂಟ್ ಭೂ ಸ್ವಾಧೀನ ಮಾಡಿಕೊಳ್ಳುವ ಕಾರ್ಯ ಉಳಿದಿದೆ. ಟೆಕ್ನಿಕಲ್ ಅಪ್ರೂವಲ್‌ಗೆ ಮತ್ತು ಫೈನಾನ್ಷಿಯಲ್ ಸ್ಯಾಂಕ್ಷನ್‌ಗೆ ಕೇಂದ್ರಸರ್ಕಾರಕ್ಕೆ ಕಳಿಸಿದ್ದೇವೆ. ಅದಕ್ಕೆ ೧,೫೬,೪೨,೪೨,೦೦೦ ರೂಪಾಯಿ ಅಂದಾಜು ಮಾಡಿದ್ದೇವೆ. ಈ ಅಂದಾಜನ್ನು ೧೫೫-೫-೧೯೭೯ರಲ್ಲಿ ಕಳಿಸಿಕೊಟ್ಟಿದ್ದೇವೆ. ಅದು ಮಂಜೂರಾಗಿ ಬಂದನಂತರ ಕೆಲಸ ತೆಗೆದುಕೊಳ್ಳುತ್ತೇವೆ.

ಶ್ರೀ ಪಂಪಾಪತಿ.—ಸ್ವಾಮಿ, ದಾವಣಗೆರೆ ನಗರದಲ್ಲಿ ನಾಲ್ಕನೇ ನಂಬರ್ ರಾಷ್ಟ್ರೀಯ ಹೆದ್ದಾರಿ ಹಾಯ್ದಿದ್ದು ನಗರದಲ್ಲುಂಟಾಗುವ ಏಪರೀತ ವಾಹನ ಸಂಚಾರದಿಂದಾಗಿ ಹಲವಾರು ಅಪಘಾತಗಳಾದುದು ಸರ್ಕಾರಕ್ಕೆ ತಿಳಿದಿದೆಯೇ ಎಂಬುದಕ್ಕೆ ತಿಳಿದಿದೆ ಎಂದು ಉತ್ತರ ಕೊಟ್ಟಿದ್ದೀರಿ. ಈ ವರ್ಷದಲ್ಲಿ ಎಷ್ಟು ಅಪಘಾತಗಳಾಗಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಬಂಗಾರಪ್ಪ.—ಈ ವರ್ಷ ಎಷ್ಟು ಎಂಬುದು ನನ್ನ ಹತ್ತಿರ ಉತ್ತರ ಇಲ್ಲ ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಿದರೆ ಹೇಳಬಹುದು. ಅಂತೂ ಹೆಚ್ಚಿನ ಅಪಘಾತಗಳು ಆಗಿರುವುದು ನಿಜ, ಅದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ತಿಳಿಸಿದ್ದೇನೆ.

ಶ್ರೀ ಪಂಪಾಪತಿ.—ಸ್ವಾಮಿ, ದಾವಣಗೆರೆ ಕಾಟನ್ ಮಿಲ್ ಜುಬ್ಲೀದವುಮಿಲ್ ಗಣೇಶ ಮಿಲ್ ಮತ್ತು ರವಿ ಆಯಿಲ್ ಮಿಲ್ ಎಲ್ಲ ಒಂದೇ ಕಡೆ ಇದೆ. ಅಲ್ಲಿ ಹೋಗಿಬರಿದರೆ ಒಂದು ರೈಲ್ವೇ ಲೆವೆಲ್ ಕ್ರಾಸಿಂಗ್ ಬರುತ್ತದೆ. ರೈಲು ಬರುವಾಗ ಗೇಟ್ ಹಾಕಿರುತ್ತಾರೆ ಇದರಿಂದ ನೂರಾರು ಪಾದಚಾರಿಗಳ ಸಂಚಾರ ನಿಂತುಹೋಗುತ್ತದೆ. ಕೆಲವು ವೇಳೆ ಟ್ರಾಫಿಕ್ ಜಾಸ್ತಿ ಆಗಿದ್ದಾಗ ಅನೇಕ ಜನ ರೈಲಿಗೆ ಸಿಕ್ಕಿ ಸತ್ತಿರುವಂಥ ನಿದರ್ಶನವೂ ಇದೆ. ಈ ಎಲ್ಲಾ ದೃಷ್ಟಿಯಿಂದ ಅಲ್ಲಿ ರಸ್ತೆ ನೇರವಾಗಿ ಮುಖ್ಯ ಎತ್ತರವಾಗಿರುವುದರಿಂದ ಅಲ್ಲಿ ಒಂದು ಅಂಡರ್ ಬ್ರಿಡ್ಜ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಇದು ಒಳ್ಳೆಯ ಸಲಹೆ ಪರಿಶೀಲಿಸುತ್ತೇನೆ.

Declaration filed in Gurpur Firka of Mangalore Taluk under land Reforms Act.

932 **Sri B. A. Mohideen**(Bantwal) —Will the Minister for Revenue be pleased to state.—

(*a*) the number of declarations filed in Gurpur Firka of Mangalore Taluk under Section 48Aof Land Reforms Act and of them how many have been decided by the Land Tribunal ;

(b) of them how many tenants have been conferred with occupancy rights,

(c) of them in how many decided cases, valuation work has been completed ?

SRI B. BASAVALINGAPPA.(Minister for Revenue—(As on 1stMarch 1979)

(a) Number of applications filed under Section 48-A 6179
Decided 1567

(b) 1268

(c) 603

ಶ್ರೀ ಬಿ. ಎ. ಮೊಹಿದ್ದೀನ್.—ಸ್ವಾಮಿ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಭೂಸುಧಾರಣೆ ಶಾಸನದ ೪೮-ಅ ಕಲಮಿನ ಮೇರೆಗೆ ಮಂಗಳೂರು ತಾಲ್ಲೂಕಿನ ಗುರುಪುರ ಫಿರ್ಕಾದಲ್ಲಿ ದಾಖಿಲ್‌ಮಾಡಿದ ಘೋಷಣೆಗಳ ಸಂಖ್ಯೆ ೬೧೭೯ ಆದರಲ್ಲಿ ೧೫೬೭ ಡಿಕ್ಲರೇಷನ್ಸ್ ಈಗಾಗಲೇ ಡಿಸೈಡ್ ಆಗಿದೆ ಎಂದು ತಿಳಿಸಿದ್ದೀರಿ ಇನ್ನು ೪೬೧೨ ಬಾಕಿ ಉಳಿದಿದೆ. ಇದನ್ನು ನೋಡಿದರೆ ಈ ದಿಸೆಯಲ್ಲಿ ಬಹಳ ವಿಳಂಬವಾಗಿದೆ ಎಂಬುದು ನನ್ನ ಅನಿಸಿಕೆ ಕೂಡಲೇ ಆದಷ್ಟು ಬೇಗ ತೀರ್ಮಾನಗಳನ್ನು ಮಾಡುವುದಕ್ಕೆ ಸರ್ಕಾರದವರು ಏನಾದರೂ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆಯೇ ?

† ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಈ ತಾಲ್ಲೂಕಿನಲ್ಲಿ ಅಡಿಷನಲ್ ಟ್ರಿಬ್ಯೂನಲ್ಸ್ ಮಾಡಿದ್ದೇವೆ. ಜಾಗ್ರತೆ ತೀರ್ಮಾನಗಳನ್ನು ಮಾಡುವುದಕ್ಕೆ ಅಧಿಕಾರಿಗಳಿಗೆ ಬೇಕಾದರೆ ಸೂಚನೆ ಕೊಡಬಹುದು. ಪುನಃ ಅಡಿಷನಲ್ ಟ್ರಿಬ್ಯುನಲ್‌ಗಳನ್ನು ಮಾಡಬೇಕೆಂದು ಅವಶ್ಯಕತೆ ಇದ್ದರೆ ಮಾಡೋಣ.

ಶ್ರೀ ಬಿ. ಎ. ಮೊಹಿದ್ದೀನ್.—ಸ್ವಾಮಿ, ತಾವು ಅಡಿಷನಲ್ ಟ್ರಿಬ್ಯುನಲ್ ಮಾಡಿ ಆದಕ್ಕೆ ಛೇರ್ಮನ್ನರನ್ನೂ ಕೂಡ ಪೋಸ್ಟ್ ಮಾಡಿದ್ದೀರಿ. ಸದಸ್ಯರನ್ನು ನಾಮಿನೇಟ್ ಮಾಡಿದ್ದೀರಿ ಆದರೆ ಅಡಿಷನಲ್ ಟ್ರಿಬ್ಯುನಲ್ಸ್‌ಗೆ ಸ್ಟಾಫ್ ಸೆಕ್ರೆಟರಿ ಸರ್ವೇಯರ್ಸ್ ಬೇಕು. ಅಲ್ಲಿ ಒಬ್ಬರು ಮಾತ್ರ ಸರ್ವೇಯರ್ ಇದ್ದಾರೆ ಸರ್ವೇ ಆಗದಿದ್ದರೆ ಕೇಸ್ ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಅಡಿಷನಲ್ ಟ್ರಿಬ್ಯುನಲ್‌ಗಳನ್ನು ಮಾಡುವುದರ ಜೊತೆಗೆ ಅದಕ್ಕೆ ತಕ್ಕಂತೆ ಸಿಬ್ಬಂದಿಯನ್ನೂ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಇದು ಒಳ್ಳೆಯ ಸಲಹೆ ಮಾನ್ಯ ಸದಸ್ಯರು ನನ್ನ ಗಮನಕ್ಕೆ ಈಗತಾನೇ ತಂದಿದ್ದಾರೆ ಇದರ ಬಗ್ಗೆ ನನ್ನ ಗಮನವನ್ನು ಹರಿಸುತ್ತೇನೆ.

ಶ್ರೀ ಬಿ. ಎ. ಮೊಹಿದ್ದೀನ್.—ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ ಮೌಲ್ಯ ನಿರ್ಣಯ. ಯಾವುದೇ ಒಂದು ಕೇಸ್ ತೀರ್ಮಾನವಾದ ಕೂಡಲೇ ಮೌಲ್ಯ ನಿರ್ಣಯವಾಗಬೇಕು. ಆದರೆ ಆ ರೀತಿ ಆಗುತ್ತಿಲ್ಲ. ಬಹಳ ವಿಳಂಬವಾಗುತ್ತಿದೆ. ಇದು ಆಗಬಾರದು ತಮ್ಮ ಉತ್ತರದಲ್ಲಿ ತಿಳಿಸಿರುವ ಪ್ರಕಾರ ೧೫೬೭ ಕೇಸುಗಳು ತೀರ್ಮಾನವಾಗಿದ್ದರೂ ಕೇವಲ ೬೦೩ ಕೇಸುಗಳಿಗೆ ಮಾತ್ರ ಮೌಲ್ಯ ನಿರ್ಣಯ ನಿಗದಿಪಡಿಸಿದ್ದಾರೆ. ಇದರಿಂದ ನ್ಯಾಯವಾಗಿ ಸಿಗುವ ಸವಲತ್ತು ಆತನಿಗೆ ಸಿಗುವುದಿಲ್ಲ. ಯಾವುದೇ ಒಂದು ಕೇಸ್ ತೀರ್ಮಾನವಾದ ಕೂಡಲೇ ಮೌಲ್ಯ ನಿರ್ಣಯ ವಾಗುವ ರೀತಿಯಲ್ಲಿ ನಿಧಾನವಾಗದಹಾಗೆ ಸೂಚನೆಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಇದೂ ಕೂಡ ಒಳ್ಳೆಯ ಸಲಹೆ. ಮಾನ್ಯ ಸದಸ್ಯರು ಹೇಳಿದಹಾಗೆ ೧೫೬೭ ಕೇಸುಗಳು ತೀರ್ಮಾನವಾಗಿದ್ದರೆ ಕೆ ವಲ ೬೦೩ ಕೇಸುಗಳಿಗೆ ಮಾತ್ರ ಮೌಲ್ಯ ನಿರ್ಣಯ ಮಾಡಿದ್ದಾರೆ. ಕೇಸು ತೀರ್ಮಾನವಾದ ಕೂಡಲೇ ಮೌಲ್ಯ ನಿರ್ಣಯವನ್ನು ಮಾಡಬೇಕೆಂದು ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇನೆ.